OS 60/2017 DW-1.

<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 26.03.2026</u>

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ. **SVS** ವಕೀಲರಿಂದಃ</u>

1. ನಾನು ಪದವಿದರನಾಗಿದ್ದೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ವಾದಿಯು ಈ ದಾವೆಯನ್ನು ಭಾಗಂಶ ಕೋರಿ ದಾವೆಯನ್ನು ಸಲ್ಲಿಸಿದ್ದಾರೆ. ತಕರಾರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿರುವ ಅಂಶಗಳನ್ನು ನಾನೇ ತಿಳಿದು ನಾನೇ ನಮ್ಮ ವಕೀಲರಿಗೆ ಹೇಳಿದ್ದೇನೆ. ನಾನು ದಾವಾ ಸೊತ್ತನ್ನು ಖರೀದಿ ಮಾಡುವ ಮುನ್ನ ಅದರ ಮೂಲ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ವಿಭಾಗದ ಮೂಲಕ ಪ್ರತಿವಾದಿ-5 ರವರಿಗೆ ಬಂದಿತ್ತು, ಅವರು ನನಗೆ ಮಾರಾಟ ಮಾಡಿದ್ದರು. ವಿಭಾಗವಾಗುವ ಮೊದಲು ಯಾರಿಗೆ ಸೇರಿದ್ದು ಎಂಬುದು ನಾನು ತಿಳಿದುಕೊಂಡಿಲ್ಲ.

2. ದಾವಾ ಸೊತ್ತಿನ ಹಳೇ ಸ. ನಂ. 73 ಮೂಲತಃ ದೊಡ್ಡ ಘಧ್ಯಪ್ಪರವರಿಗೆ ಸೇರಿತ್ತು ಮತ್ತು ಅದು 6 ಎಕರೆ 29 ಗುಂಟೆ ಜಮೀನು ಇತ್ತು ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಗೊತ್ತಿಲ್ಲ. ಸದರಿ ಘಧ್ಯಪ್ಪನಿಗೆ 4 ಜನ ಮಕ್ಕಳು ಇದ್ದರು ಎಂದರೆ ಗೊತ್ತಿಲ್ಲ , ಆ ಪೈಕಿ ವಾದಿಯ ತಂದೆ ಒಬ್ಬರು ಆಗಿದ್ದರು ಎಂದರೆ ಗೊತ್ತಿಲ್ಲ. ವಾದಿಯ ತಂದೆ ಬೈರಪ್ಪ ತೀರಿಕೊಂಡ ನಂತರ ಆತನ 3 ಜನ ಸಹೋದರು ಮೇಲೆ ಹೆಳಿದ ಸೊತ್ತನ್ನು ತನ್ನ ಹೆಸರಿಗೆ ಖಾತೆಯನ್ನು ಮಾಡಿಕೊಂಡರು ಎಂದರೆ ಗೊತ್ತಿಲ್ಲ.

<u>ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಲಾಗಿ ನೀಡಲಾಯಿತು.</u>

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.